## ನಾಂದಿಪದ



ಕಲೆ: ವಿಠ್ಠಲಪ್ಪ ಶಂ. ಹೂಗಾರ

# ಕಥೆಗಳಿಗಿದು ಕಾಲ

**ಮಾವಿನ** ಪರಿಮಳವನ್ನೂ ಗುಲ್‌ಮೊಹರ್‌ಗಳ ಕೆಂಪು ಕಂಪನ್ನೂ ತುಂಬಿಕೊಂಡ ಮೇ ಮಾಹೆಯ ಈ ಸಂಚಿಕೆ ರುಚಿಕರ ಕಥೆಗಳ ಸಂಕಲನ. ವಿವಿಧ ವಯೋಮಾನದ ಕಥೆಗಾರರು ಕಟ್ಟಿಕೊಟ್ಟಿರುವ ಕಥನಲೋಕಗಳು ಮನುಷ್ಯಜೀವನದ ಅಸಾಧಾರಣ ಚೆಲುವು ಹಾಗೂ ಅಗಣಿತ ಸಂಕಟಗಳನ್ನು ಸಹೃದಯರ ಗಮನಕ್ಕೆ ತರುವಂತಿವೆ. ಕನ್ನಡ ಕಥಾಸಾಹಿತ್ಯಕ್ಕೆ ನಿರಂತರವಾಗಿ ಸೇರುತ್ತಿರುವ ಹೊಸ ನೀರಿನ ನಿದರ್ಶನದಂತಿರುವ ಈ ಕಥೆಗಳು, ಕಥೆ ಕಟ್ಟುವ ನಿಟ್ಟಿನಲ್ಲಿ ಕಥೆಗಾರರು ಅನುಸರಿಸುವ ಬಗೆ ಬಗೆ ವೈಖರಿಗಳಿಗೆ ಉದಾಹರಣೆಗಳಂತೆಯೂ ಇವೆ. ಹಿರಿಯ ಕಥೆಗಾರ ನಾ. ಮೊಗಸಾಲೆ ಅವರ ಸಂದರ್ಶನ ಈ ಸಂಚಿಕೆಯಲ್ಲಿದ್ದು, 'ಕಥೆ ಎಷ್ಟು ಮುಖ್ಯವೋ, ಕಥೆ ಹೇಳುವುದೂ ಅಷ್ಟೇ ಮುಖ್ಯ' ಎನ್ನುವ ಅವರ ಮಾತು ಕಥೆ-ಕಥನದ ಮಹತ್ವಕ್ಕೆ ಅಡಿಗೆರೆ ಎಳೆದಂತಿದೆ.

ಮಾವಿನ ಸಖ್ಯದ ಕಟು ಮಧುರ ಆಖ್ಯಾನ ವ್ಯಾಖ್ಯಾನ ಈ ಸಂಚಿಕೆಯ ಮತ್ತೊಂದು ರುಚಿಕರ ಓದಿನಫಲ. ಬೇಸಿಗೆಯ ಅವಿಭಾಜ್ಯ ಭಾಗದಂತಿರುವ ಮಾವು, ಧಗೆಯ ದಿನಗಳನ್ನು ಕೊಂಚ ಸಹನೀಯಗೊಳಿಸಬಲ್ಲ ಶಕ್ತಿಯಿರುವ ಅಮೃತಫಲ. ಕನ್ನಡಿಗರ ಪಾಲಿಗೆ ಮಾವೆನ್ನುವುದು ಬರಿಯ ಹಣ್ಣಲ್ಲ; ಅದೊಂದು ಸಂಸ್ಕೃತಿ. ಈ 'ಫಲಸಂಸ್ಕೃತಿ'ಯನ್ನು ವಿಶದವಾಗಿ ಗುರ್ತಿಸುವ ಪ್ರಯತ್ನದ ಅನನ್ಯ ಪ್ರಬಂಧ 'ಮಯೂರ'ದಲ್ಲಲ್ಲದೆ ಇನ್ನೆಲ್ಲಿ ಪ್ರಕಟಗೊಳ್ಳಬೇಕು?

ಹಿರಿಯ ವಿದ್ವಾಂಸ ಸಿ.ಎನ್. ರಾಮಚಂದ್ರನ್ ಅವರ 'ಮಧುರಭಕ್ತಿ ಮತ್ತು ಮುಸ್ಲಿಂ ಕವಿತೆಗಳು' ಅಧ್ಯಯನ ಬರಹದ ಶೀರ್ಷಿಕೆಯೇ ಬರಹದ ಮಹತ್ವವನ್ನು ಹೇಳುವಂತಿದೆ. ಅಮೀರ್ ಖುಸ್ರೋ ಮತ್ತು ಸುಲ್ತಾನ್ ಬಹು ಅವರ ಕಾವ್ಯದ ಮಾದರಿಗಳನ್ನು ಪರಿಚಯಿಸುವ ಈ ಬರಹ, ಕಾವ್ಯಪ್ರಿಯರಿಗೆ ಇಷ್ಟವಾಗುವಂತಿದೆ. ಭಾರತೀಯ ಪರಂಪರೆಯ ಅಪೂರ್ವ ಕಲಾವಿದೆ ವೈ.ಜಿ. ಶ್ರೀಮತಿ ಅವರನ್ನು ಪರಿಚಯಿಸುವ ಬರಹ ಈ ಸಂಚಿಕೆಯ ಮತ್ತೊಂದು ವಿಶೇಷ. ಈ ಕಿರುಬರಹ ಭಾರತೀಯ ಕಲಾಲೋಕ ಅಷ್ಟಾಗಿ ಗುರ್ತಿಸದ ಮಹತ್ವದ ಕಲಾವಿದೆಯೊಬ್ಬರನ್ನು ಪರಿಚಯಿಸುವ ಕೆಲಸ ಮಾಡಿದೆ.

'ಮಯೂರ'ದ ಮಾರ್ಚ್ ಹಾಗೂ ಏಪ್ರಿಲ್ ಸಂಚಿಕೆಗಳಿಗೆ ಸಹೃದಯರಿಂದ ಮೆಚ್ಚುಗೆಯ ಮಹಾಪೂರವೇ ವ್ಯಕ್ತವಾಗಿದೆ. ಓದುಗರ ಒತ್ತಾಸೆಯೇ 'ಮಯೂರ'ದ ನಿರಂತರ ಪ್ರಯೋಗಶೀಲತೆಗೆ ಪ್ರೇರಣೆ.

**ಮಯೂರ ಬಳಗ**

editormy@mayura.co.in